# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ :: ರಾಮನಗರ ವಿಭಾಗ :: ರಾಮನಗರ

ಸಂ:ಕರಾಸಾ:ರಾನವಿ:ಸಂ:ವಾ: 1486 :19-20 ದಿನಾಂಕ:16.08.2019

## ಸಂಧಾನ ಪ್ರಕಟಣೆ ಸಂ:05/2019-20

ಕರಾರಸಾ ಸಂಸ್ಥೆ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ ಇವರು ಈ ಕೆಳಕಂಡ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ ವಾಣಿಜ್ಯ ಮಳಿಗೆಗಳಿಗೆ 05 ವರ್ಷಗಳವರೆಗೆ ಮತ್ತು ತೆರೆದ ಸ್ಥಳ ವಾಣಿಜ್ಯ ಮಳಿಗೆಗೆ 03 ವರ್ಷಗಳವರೆಗೆ ಪರವಾನಗಿ ನೀಡಲು ಸಂಧಾನ ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡುವ ಸಲುವಾಗಿ ಈ ಪ್ರಕಟಣೆಯನ್ನು ಹೊರಡಿಸಲಾದ ವಿವರಗಳು ಈ ಕೆಳಕಂಡಂತಿದೆ.

| ಕ್ರ ಸಂ | ಬಸ್ ನಿಲ್ದಾಣದ ಹೆಸರು (ಸ್ಥಳ) | ಮಳಿಗೆಯ ಹೆಸರು/ಸಂಖ್ಯೆ ವಿವರ | ವಿಸ್ತೀರ್ಣ (ಚದರ ಅಡಿಗಳು) | ಕನಿಷ್ಠ (ಮಿತವ್ಯಯಿ) ಮಾಸಿಕ ಪರವಾನಗಿ ಶುಲ್ಕ (ರೂ) | ಇ.ಎಂ.ಡಿ., ಮೊತ್ತ (ರೂ) | ಅರ್ಜಿ ಫಾರಂ ಮತ್ತು ಜಿಎಸ್‌ಟಿ., ಶುಲ್ಕ(ರೂ) |
|---|---|---|---|---|---|---|
| 1 | ಸೋಲೂರು | ಜನರಲ್ ಮಳಿಗೆ (ಸಂ:02) | 115.60 | 1350/- | 4050/- | 100+18=118/- |
| 2 | ಸೋಲೂರು | ಸೈಕಲ್/ಸ್ಕೂಟರ್ ನಿಲ್ದಾಣ (ಸಂ:04) (ತೆರೆದ ಸ್ಥಳ) | 2000 | 4500/- | 13500/- | 100+18=118/- |
| 3 | ಕೋಡಿಹಳ್ಳಿ | ಜನರಲ್ ಮಳಿಗೆ (ಸಂ:05) | 213.28 | 7000/- | 21000/- | 100+18=118/- |
| 4 | ಕೋಡಿಹಳ್ಳಿ | ಜನರಲ್ ಮಳಿಗೆ (ಸಂ:07) | 214.53 | 7000/- | 21000/- | 100+18=118/- |
| 5 | ಕೋಡಿಹಳ್ಳಿ | ಜನರಲ್ ಮಳಿಗೆ (ಸಂ:08) (ಮಹಡಿ ಮಳಿಗೆ) | 217.56 | 4000/- | 12000/- | 100+18=118/- |
| 6 | ಕೋಡಿಹಳ್ಳಿ | ಜನರಲ್ ಮಳಿಗೆ (ಸಂ:09) (ಮಹಡಿ ಮಳಿಗೆ) | 211.70 | 4000/- | 12000/- | 100+18=118/- |
| 7 | ಕೋಡಿಹಳ್ಳಿ | ಜನರಲ್ ಮಳಿಗೆ (ಸಂ:10) (ಮಹಡಿ ಮಳಿಗೆ) | 203.33 | 4000/- | 12000/- | 100+18=118/- |
| 8 | ಕೋಡಿಹಳ್ಳಿ | ಜನರಲ್ ಮಳಿಗೆ (ಸಂ:11) (ಮಹಡಿ ಮಳಿಗೆ) | 208.90 | 4000/- | 12000/- | 100+18=118/- |
| 9 | ಕೋಡಿಹಳ್ಳಿ | ಜನರಲ್ ಮಳಿಗೆ (ಸಂ:12) (ಮಹಡಿ ಮಳಿಗೆ) | 197.30 | 4000/- | 12000/- | 100+18=118/- |
| 10 | ಕೋಡಿಹಳ್ಳಿ | ಜನರಲ್ ಮಳಿಗೆ (ಸಂ:13) (ಮಹಡಿ ಮಳಿಗೆ) | 219.39 | 4000/- | 12000/- | 100+18=118/- |
| 11 | ಕೋಡಿಹಳ್ಳಿ | ಜನರಲ್ ಮಳಿಗೆ (ಸಂ:14) (ಮಹಡಿ ಮಳಿಗೆ) | 218.64 | 4000/- | 12000/- | 100+18=118/- |
| 12 | ಕೋಡಿಹಳ್ಳಿ | ಜನರಲ್ ಮಳಿಗೆ (ಸಂ:15) (ಮಹಡಿ ಮಳಿಗೆ) | 197.86 | 4000/- | 12000/- | 100+18=118/- |
| 13 | ಕೋಡಿಹಳ್ಳಿ | ಜನರಲ್ ಮಳಿಗೆ (ಸಂ:16) (ಮಹಡಿ ಮಳಿಗೆ) | 212.75 | 4000/- | 12000/- | 100+18=118/- |
| 14 | ಕೋಡಿಹಳ್ಳಿ | ಜನರಲ್ ಮಳಿಗೆ (ಸಂ:17) (ಮಹಡಿ ಮಳಿಗೆ) | 189.01 | 4000/- | 12000/- | 100+18=118/- |
| 15 | ಕೋಡಿಹಳ್ಳಿ | ಜನರಲ್ ಮಳಿಗೆ (ಸಂ:18) (ಮಹಡಿ ಮಳಿಗೆ) | 222.49 | 4000/- | 12000/- | 100+18=118/- |
| 16 | ಚನ್ನಪಟ್ಟಣ | ಜನರಲ್ ಮಳಿಗೆ (ಸಂ:03) | 166 | 24845/- | 74535/- | 248+45=293/- |
| 17 | ಚನ್ನಪಟ್ಟಣ | ಜನರಲ್ ಮಳಿಗೆ (ಸಂ:10) | 166 | 31533/- | 94599/- | 315+57=372/- |

ಹಾಗೂ **ನಿಗಮದ ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ:788/-2017ರ ಅನ್ವಯ** ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಬಸ್ ಕನಕಪುರ ಹೊಸ ಬಸ್ ನಿಲ್ದಾಣದ ತೆರೆದ ಸ್ಥಳದಲ್ಲಿ ಖಾಲಿ ಇರುವ 10 ಗ್ಲೋಸೈನ್ ಫಲಕಗಳ ಜಾಹೀರಾತುಗಳಿಗೆ 05 ವರ್ಷಗಳವರೆಗೆ ಸಂಧಾನದ ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡುವ ಸಲುವಾಗಿ ಈ ಪ್ರಕಟಣೆಯನ್ನು ಹೊರಡಿಸಲಾದ ವಿವರಗಳು ಈ ಕೆಳಕಂಡಂತಿದೆ.

| ಕ್ರ ಸಂ. | ಪ್ಯಾಕೇಜ್ ಸಂ. | ಸ್ಥಳದ ವಿವರ | ವಿಸ್ತೀರ್ಣದ ವಿವರ (ಚ.ಅ) | ಗ್ಲೋಸೈನ್ ಫಲಕಗಳ ಸಂಖ್ಯೆ | ಒಟ್ಟು ವಿಸ್ತೀರ್ಣ (ಚ.ಅ) | ದರ ಚ.ಅಡಿ ಗಳಲ್ಲಿ | ಮಾಸಿಕ ಮಿತವ್ಯಯ ಶುಲ್ಕ ರೂ. | ಇಎಮ್‌ಡಿ., ಶುಲ್ಕ ರೂ. | ಅರ್ಜಿ ಶುಲ್ಕ + ಜಿಎಸ್ ಟಿ., ಶುಲ್ಕ ರೂ. |
|---|---|---|---|---|---|---|---|---|---|
| 1 | 11 | ಕನಕಪುರ ಹೊಸ ಬಸ್ ನಿಲ್ದಾಣ | ಗ್ಲೋಸೈನ್ ಫಲಕಗಳು 4 * 2 =8 ಚ.ಅಡಿಗಳಲ್ಲಿ (ಒಟ್ಟು 16 ಚ.ಅ) (ಎರಡು ಕಡೆ ಪ್ರದರ್ಶನ) | 10 | 160 | 10.00 | 1600/- | 4800/- | 100+18=118 |

★ **ಸೂಚನೆಗಳು:-**

1) ಮೇಲೆ ತಿಳಿಸಿರುವ ವಾಣಿಜ್ಯ ಮಳಿಗೆಗಳಿಗೆ/ಗ್ಲೋಸೈನ್ ಫಲಕಗಳ ಜಾಹಿರಾತುಗಳಿಗೆ ಸಂಧಾನ ಅರ್ಜಿಗಳ ಶುಲ್ಕ ಮತ್ತು ಇಎಂಡಿ., ಹಣವನ್ನು ಡಿಡಿ ಮೂಲಕ **ವಿಭಾಗೀಯ ನಿಯಂತ್ರಣಾಧಿಕಾರಿ, ಕರಾರಸಾ ನಿಗಮ, ರಾಮನಗರ ವಿಭಾಗ**" ಇವರ ಹೆಸರಿನಲ್ಲಿ ಸಲ್ಲಿಸುವುದು.
2) ಅರ್ಜಿಗಳನ್ನು ದಿನಾಂಕ:17.08.2019 ರಿಂದ ದಿನಾಂಕ:05.09.2019ರ 1100 ಗಂಟೆಗಳವರೆಗೆ ಪಡೆಯಬಹುದು.
3) ದಿ:05.09.2019 ರಂದು 1200 ಗಂಟೆಗೆ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಅರ್ಜಿದಾರರು/ಪ್ರತಿನಿಧಿಗಳ ಎದುರು ಸಂಧಾನ ಸಭೆಯನ್ನು ನಡೆಸಲಾಗುವುದು. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ:080-27272306. ಸಂಧಾನ ಸಭೆಯನ್ನು ನಡೆಸುವ ಮತ್ತು ರದ್ದುಪಡಿಸುವ ಹಾಗೂ ಅರ್ಜಿಗಳನ್ನು ತಿರಸ್ಕರಿಸುವ ಅಥವಾ ಮಾರ್ಪಡಿಸುವ ಅಧಿಕಾರವನ್ನು ನಿಗಮವು ಕಾಯ್ದಿರಿಸಿಕೊಂಡಿದೆ.

ವಿಭಾಗೀಯ ನಿಯಂತ್ರಣಾಧಿಕಾರಿ
ರಾಮನಗರ ವಿಭಾಗ:ರಾಮನಗರ

<u>ಪ್ರತಿಯನ್ನು ಗೌರವಪೂರ್ವಕವಾಗಿ:-</u>

1) ನಿರ್ದೇಶಕರು (ಭ : ಜಾ), ಕರಾರಸಾ ಸಂಸ್ಥೆ. ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ.
2) ಮುಖ್ಯ ಸಂಚಾರ ವ್ಯವಸ್ಥಾಪಕರು (ಸಂಚಾರ), ಕರಾರಸಾ ಸಂಸ್ಥೆ. ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ.
3) ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ), ಕರಾರಸಾ ಸಂಸ್ಥೆ. ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ.
4) ವ್ಯವಸ್ಥಾಪಕರ ನಿರ್ದೇಶಕರು, ಬೆಂ.ಮ.ನ.ಸಾ.ಸಂಸ್ಥೆ/ವಾಕರಾರಸಾಸಂಸ್ಥೆ/ಈಕರಾರಸಾಸಂಸ್ಥೆ, ರವರ ಮಾಹಿತಿಗಾಗಿ.
5) ಎಲ್ಲಾ ವಿಭಾಗ ನಿಯಂತ್ರಣಾಧಿಕಾರಿಗಳು, ಕ.ರಾ.ರ.ಸಾ.ನಿಗಮ, ರವರ ಮಾಹಿತಿಗಾಗಿ.

<u>ಪ್ರತಿಯನ್ನು:-</u>

1) ವಿಭಾಗ ಸಂಚಾಲನಾಧಿಕಾರಿ/ಭದ್ರತಾ & ಜಾಗೃತಾಧಿಕಾರಿ/ಲೆಕ್ಕಾಧಿಕಾರಿ/ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ ಸಹಾಯಕ ಕಾನೂನು ಅಧಿಕಾರಿ, ರಾಮನಗರ ವಿಭಾಗ:ರಾಮನಗರ ರವರ ಮಾಹಿತಿಗಾಗಿ ಹಾಗೂ ದಿನಾಂಕ:05.09.2019ರ ಮಧ್ಯಾಹ್ನ 1200 ಗಂಟೆಗೆ ನಡೆಯುವ ಸಂಧಾನದಲ್ಲಿ ಭಾಗವಹಿಸಲು ತಿಳಿಸಲಾಗಿದೆ.
2) ಘಟಕ ವ್ಯವಸ್ಥಾಪಕರು (ಕನಕಪುರ:ಆನೇಕಲ್:ಚನ್ನಪಟ್ಟಣ:ಹಾರೋಹಳ್ಳಿ:ರಾಮನಗರ:ಮಾಗಡಿ) ಇವರ ಮಾಹಿತಿಗಾಗಿ ಹಾಗೂ ಸದರಿ ಪ್ರತಿಯನ್ನು ಘಟಕದ ಮತ್ತು ಬಸ್ ನಿಲ್ದಾಣದ ಸೂಚನಾ ಫಲಕದಲ್ಲಿ ಹಾಕಲು ಸೂಚಿಸಲಾಗಿದೆ.

ವಿಭಾಗೀಯ ನಿಯಂತ್ರಣಾಧಿಕಾರಿ
ರಾಮನಗರ ವಿಭಾಗ: ರಾಮನಗರ

# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ :: ರಾಮನಗರ ವಿಭಾಗ :: ರಾಮನಗರ

ಸಂ:ಕರಾಸಾ:ರಾನವಿ:ಸಂ:ವಾ: 1486 :19-20 ದಿನಾಂಕ: 16.08:2019

## ಸಂಧಾನ ಪ್ರಕಟಣೆ ಸಂ:05/2019-20

ಕರಾರಸಾ ಸಂಸ್ಥೆ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ ಇವರು ಈ ಕೆಳಕಂಡ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ ವಾಣಿಜ್ಯ ಮಳಿಗೆಗಳಿಗೆ 05 ವರ್ಷಗಳವರೆಗೆ ಮತ್ತು ತೆರೆದ ಸ್ಥಳ ವಾಣಿಜ್ಯ ಮಳಿಗೆಗೆ 03 ವರ್ಷಗಳವರೆಗೆ ಪರವಾನಗಿ ನೀಡಲು ಸಂಧಾನ ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡುವ ಸಲುವಾಗಿ ಈ ಪ್ರಕಟಣೆಯನ್ನು ಹೊರಡಿಸಲಾದ ವಿವರಗಳು ಈ ಕೆಳಕಂಡಂತಿದೆ.

| ಕ್ರ ಸಂ | ಬಸ್ ನಿಲ್ದಾಣದ ಹೆಸರು (ಸ್ಥಳ) | ಮಳಿಗೆಯ ಹೆಸರು/ಸಂಖ್ಯೆ ವಿವರ | ವಿಸ್ತೀರ್ಣ (ಚದರ ಅಡಿಗಳು) | ಕನಿಷ್ಠ (ಮಿತವ್ಯಯಿ) ಮಾಸಿಕ ಪರವಾನಗಿ ಶುಲ್ಕ (ರೂ) | ಇ.ಎಂ.ಡಿ., ಮೊತ್ತ (ರೂ) | ಅರ್ಜಿ ಫಾರಂ ಮತ್ತು ಜಿಎಸ್‌ಟಿ., ಶುಲ್ಕ(ರೂ) |
|---|---|---|---|---|---|---|
| 1 | ಸೋಲೂರು | ಜನರಲ್ ಮಳಿಗೆ (ಸಂ:02) | 115.60 | 1350/- | 4050/- | 100+18=118/- |
| 2 | ಸೋಲೂರು | ಸೈಕಲ್/ಸ್ಕೂಟರ್ ನಿಲ್ದಾಣ (ಸಂ:04) (ತೆರೆದ ಸ್ಥಳ) | 2000 | 4500/- | 13500/- | 100+18=118/- |
| 3 | ಕೋಡಿಹಳ್ಳಿ | ಜನರಲ್ ಮಳಿಗೆ (ಸಂ:05) | 213.28 | 7000/- | 21000/- | 100+18=118/- |
| 4 | ಕೋಡಿಹಳ್ಳಿ | ಜನರಲ್ ಮಳಿಗೆ (ಸಂ:07) | 214.53 | 7000/- | 21000/- | 100+18=118/- |
| 5 | ಕೋಡಿಹಳ್ಳಿ | ಜನರಲ್ ಮಳಿಗೆ (ಸಂ:08) (ಮಹಡಿ ಮಳಿಗೆ) | 217.56 | 4000/- | 12000/- | 100+18=118/- |
| 6 | ಕೋಡಿಹಳ್ಳಿ | ಜನರಲ್ ಮಳಿಗೆ (ಸಂ:09) (ಮಹಡಿ ಮಳಿಗೆ) | 211.70 | 4000/- | 12000/- | 100+18=118/- |
| 7 | ಕೋಡಿಹಳ್ಳಿ | ಜನರಲ್ ಮಳಿಗೆ (ಸಂ:10) (ಮಹಡಿ ಮಳಿಗೆ) | 203.33 | 4000/- | 12000/- | 100+18=118/- |
| 8 | ಕೋಡಿಹಳ್ಳಿ | ಜನರಲ್ ಮಳಿಗೆ (ಸಂ:11) (ಮಹಡಿ ಮಳಿಗೆ) | 208.90 | 4000/- | 12000/- | 100+18=118/- |
| 9 | ಕೋಡಿಹಳ್ಳಿ | ಜನರಲ್ ಮಳಿಗೆ (ಸಂ:12) (ಮಹಡಿ ಮಳಿಗೆ) | 197.30 | 4000/- | 12000/- | 100+18=118/- |
| 10 | ಕೋಡಿಹಳ್ಳಿ | ಜನರಲ್ ಮಳಿಗೆ (ಸಂ:13) (ಮಹಡಿ ಮಳಿಗೆ) | 219.39 | 4000/- | 12000/- | 100+18=118/- |
| 11 | ಕೋಡಿಹಳ್ಳಿ | ಜನರಲ್ ಮಳಿಗೆ (ಸಂ:14) (ಮಹಡಿ ಮಳಿಗೆ) | 218.64 | 4000/- | 12000/- | 100+18=118/- |
| 12 | ಕೋಡಿಹಳ್ಳಿ | ಜನರಲ್ ಮಳಿಗೆ (ಸಂ:15) (ಮಹಡಿ ಮಳಿಗೆ) | 197.86 | 4000/- | 12000/- | 100+18=118/- |
| 13 | ಕೋಡಿಹಳ್ಳಿ | ಜನರಲ್ ಮಳಿಗೆ (ಸಂ:16) (ಮಹಡಿ ಮಳಿಗೆ) | 212.75 | 4000/- | 12000/- | 100+18=118/- |
| 14 | ಕೋಡಿಹಳ್ಳಿ | ಜನರಲ್ ಮಳಿಗೆ (ಸಂ:17) (ಮಹಡಿ ಮಳಿಗೆ) | 189.01 | 4000/- | 12000/- | 100+18=118/- |
| 15 | ಕೋಡಿಹಳ್ಳಿ | ಜನರಲ್ ಮಳಿಗೆ (ಸಂ:18) (ಮಹಡಿ ಮಳಿಗೆ) | 222.49 | 4000/- | 12000/- | 100+18=118/- |
| 16 | ಚನ್ನಪಟ್ಟಣ | ಜನರಲ್ ಮಳಿಗೆ (ಸಂ:03) | 166 | 24845/- | 74535/- | 248+45=293/- |
| 17 | ಚನ್ನಪಟ್ಟಣ | ಜನರಲ್ ಮಳಿಗೆ (ಸಂ:10) | 166 | 31533/- | 94599/- | 315+57=372/- |

ಹಾಗೂ **ನಿಗಮದ ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ:788/-2017ರ ಅನ್ವಯ** ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಬಸ್ ಕನಕಪುರ ಹೊಸ ಬಸ್ ನಿಲ್ದಾಣದ ತೆರೆದ ಸ್ಥಳದಲ್ಲಿ ಖಾಲಿ ಇರುವ 10 ಗ್ಲೋಸೈನ್ ಫಲಕಗಳ ಜಾಹೀರಾತುಗಳಿಗೆ 05 ವರ್ಷಗಳವರೆಗೆ ಸಂಧಾನದ ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡುವ ಸಲುವಾಗಿ ಈ ಪ್ರಕಟಣೆಯನ್ನು ಹೊರಡಿಸಲಾದ ವಿವರಗಳು ಈ ಕೆಳಕಂಡಂತಿದೆ.

| ಕ್ರ ಸಂ. | ಪ್ಯಾಕೇಜ್ ಸಂ. | ಸ್ಥಳದ ವಿವರ | ವಿಸ್ತೀರ್ಣದ ವಿವರ (ಚ.ಅ) | ಗ್ಲೋಸೈನ್ ಫಲಕಗಳ ಸಂಖ್ಯೆ | ಒಟ್ಟು ವಿಸ್ತೀರ್ಣ (ಚ.ಅ) | ದರ ಚ.ಅಡಿ ಗಳಲ್ಲಿ | ಮಾಸಿಕ ಮಿತವ್ಯಯಿ ಶುಲ್ಕ ರೂ. | ಇಎಮ್‌ಡಿ., ಶುಲ್ಕ ರೂ. | ಅರ್ಜಿ ಶುಲ್ಕ + ಜಿಎಸ್ ಟಿ., ಶುಲ್ಕ ರೂ. |
|---|---|---|---|---|---|---|---|---|---|
| 1 | 11 | ಕನಕಪುರ ಹೊಸ ಬಸ್ ನಿಲ್ದಾಣ | ಗ್ಲೋಸೈನ್ ಫಲಕಗಳು 4 * 2 =8 ಚ.ಅಡಿಗಳಲ್ಲಿ (ಒಟ್ಟು 16 ಚ.ಅ) (ಎರಡು ಕಡೆ ಪ್ರದರ್ಶನ) | 10 | 160 | 10.00 | 1600/- | 4800/- | 100+18=118 |

★ **ಷರತ್ತ್ ಮತ್ತು ನಿಬಂಧನೆಗಳು:-**

1) ಮಳಿಗೆಯಲ್ಲಿ ನಿಗಮವು ನಿಗದಿಪಡಿಸಿರುವ ಜನರಲ್ ಮಳಿಗೆಗೆ ಸಂಬಂಧಿಸಿದಂತೆ ವ್ಯಾಪಾರವನ್ನು ಮಾಡಲು ಮಾತ್ರ ಅವಕಾಶವಿರುತ್ತದೆ.
2) ಸಂಧಾನ ಸಭೆಯಲ್ಲಿ ಭಾಗವಹಿಸುವ ಆಸಕ್ತರು ಇಎಂಡಿ ಹಣದ ಮೂಲ ಡಿಡಿಯನ್ನು ಸಂಧಾನ ಅರ್ಜಿಯ ಜೊತೆಯಲ್ಲಿ ಸಲ್ಲಿಸತಕ್ಕದ್ದು, ಸಂಧಾನವನ್ನು ಟೆಂಡರುದಾರರ ಅಥವಾ ಅವರ ಅಧಿಕೃತ ಪ್ರತಿನಿಧಿಗಳ ಸಮ್ಮುಖದಲ್ಲಿ ನಡೆಸಲಾಗುವುದು.
3) ಮಳಿಗೆಯಲ್ಲಿ ಮಾರಾಟ ಮಾಡುವ ಆಹಾರ, ತಿಂಡಿ ಪದಾರ್ಥ ಸಾಮಾಗ್ರಿ, ನೀರಿನ ಪೊಟ್ಟಣ ಇತ್ಯಾದಿ ವಸ್ತುಗಳನ್ನು ತಯಾರಕರು, ನಿರ್ದಿಷ್ಟಪಡಿಸಿದ ಬೆಲೆಗೆ ಮಾರಾಟ ಮಾಡುವುದು.
4) ಆಯ್ಕೆ ಆದ ಪರವಾನಿಗೆದಾರರು ತಾವು ಸಲ್ಲಿಸಿರುವ ಇಎಮ್‌ಡಿ. ಹಣವನ್ನು ಹೊಂದಾಣಿಕೆ ಮಾಡಿಕೊಂಡು ಸೂಚಿಸಿರುವ ಪರವಾನಗಿ ಶುಲ್ಕದ ೩ರಷ್ಟು ಹಣವನ್ನು ಭದ್ರತಾ ಠೇವಣಿ ಹಣವನ್ನು ಡಿ.ಡಿ.ರೂಪದಲ್ಲಿ " **ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕರಾರಸಾ ನಿಗಮ, ರಾಮನಗರ ವಿಭಾಗ** " ಇವರ ಹೆಸರಿನಲ್ಲಿ ಪಾವತಿಸುವುದು .
5) ಡಿ.ಡಿ.ಯನ್ನು " **ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿಗಮ, ರಾಮನಗರ ವಿಭಾಗ**" ಇವರ ಹೆಸರಿನಲ್ಲಿ ಯಾವುದೇ ರಾಷ್ಟ್ರೀಕೃತ ಬ್ಯಾಂಕ್ ನಿಂದ ಪಡೆದು ಸಲ್ಲಿಸುವುದು.
6) ಶಾಶ್ವತ ವಾಣಿಜ್ಯ ಮಳಿಗೆಗಳನ್ನು ಯಾವ ಸ್ಥಿತಿಯಲ್ಲಿವೆಯೊ ಹಾಗೆಯೇ ನೀಡಲಾಗುವುದು.
7) ಸಂಸ್ಥೆಯು ಆಗಿಂದಾಗ್ಗೆ ವಿಧಿಸುವ ಷರತ್ತು/ನಿಯಮಾವಳಿಗಳಿಗೆ ಬದ್ಧರಾಗಿರಬೇಕು.

ಮುಂದುವರೆದಂತೆ-2

8) ಭಾರತ ಸರ್ಕಾರ/ಕರ್ನಾಟಕ ಸರ್ಕಾರ/ಕರಾರಸಾ ನಿಗಮವು ಆಗಿಂದಾಗ್ಗೆ ವಿಧಿಸುವ ಷರತ್ತು/ನಿಬಂಧನೆಗಳಿಗೆ ಪರವಾನಗಿದಾರರು ಬದ್ಧರಾಗಿರಬೇಕು.

9) ಸಂಸ್ಥೆಯ ಕಪ್ಪು ಪಟ್ಟಿಯ ವ್ಯಾಪ್ತಿಯಲ್ಲಿ ಬರುವ ವ್ಯಕ್ತಿಗಳು ಸಂಧಾನದಲ್ಲಿ ಭಾಗವಹಿಸಲು ಅರ್ಹರಲ್ಲ.

10) ಸಂಧಾನದಲ್ಲಿ ಭಾಗವಹಿಸುವ ಅರ್ಜಿದಾರರು ವಿಳಾಸದ ಮೂಲ ಪ್ರತಿಯನ್ನು ಸಲ್ಲಿಸಬೇಕು. (ಆಧಾರ ಕಾರ್ಡ್, ರೇಷನ್ ಕಾರ್ಡ್, ಚುನಾವಣೆ ಗುರುತಿನ ಕಾರ್ಡ್, ಇವುಗಳಲ್ಲಿ ಯಾವುದಾದರೂ ಒಂದರ ಮೂಲ ಪ್ರತಿ)

11) ಬಾಲ ಕಾರ್ಮಿಕರನ್ನು ನೇಮಿಸಲು ಅವಕಾಶವಿರುವುದಿಲ್ಲ.

12) ಇ.ಎಸ್.ಐ ಕಾಯ್ದೆಯ ವ್ಯಾಪ್ತಿಯಲ್ಲಿ ಬರುವ ವಾಣಿಜ್ಯ ಮಳಿಗೆಗಳ/ಸ್ಥಳಗಳ ಪರವಾನಗಿದಾರರುಗಳು ಇ.ಎಸ್.ಐ ಕೋಡನ್ನು ಹೊಂದಿರಬೇಕು ಮತ್ತು ಅವರುಗಳ ವ್ಯಾಪ್ತಿಯಲ್ಲಿ ಬರುವ ನೌಕರರನ್ನು ಇ.ಎಸ್.ಐ, ವ್ಯಾಪ್ತಿಯಲ್ಲಿ ತರಬೇಕು ಹಾಗೂ ಕಾರ್ಡನ್ನು ಕೊಡಿಸಬೇಕು. ನಿಗದಿತ ವಂತಿಗೆಯನ್ನು ಆನ್‌ಲೈನ್‌ನಲ್ಲಿ ಸಲ್ಲಿಸಬೇಕು ಮತ್ತು ಇ.ಎಸ್.ಐ ಸೌಲಭ್ಯಗಳನ್ನು ನೌಕರರಿಗೆ ಹಾಗೂ ಅವರ ಅವಲಂಭಿತರಿಗೆ ಸಿಗುವಂತೆ ಸಹಾಯ ಮಾಡಬೇಕು.

13) ಸಂಧಾನವನ್ನು ನಡೆಸುವ ಮತ್ತು ರದ್ದುಪಡಿಸುವ ಹಾಗೂ ಅರ್ಜಿಗಳನ್ನು ತಿರಸ್ಕರಿಸುವ ಅಥವಾ ಮಾರ್ಪಡಿಸುವ ಅಧಿಕಾರವನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ.

14) ಸಂಧಾನ ಪ್ರಕ್ರಿಯೆಯಲ್ಲಿ ಬಿಡ್‌ದಾರರು ನಿಗದಿಪಡಿಸಿದ ಇ.ಎಂ.ಡಿ. ಮೊತ್ತವನ್ನು ಡಿ.ಡಿ. ಮುಖೇನ ಟೆಂಡರ್ ತೆರೆಯುವ ದಿನಾಂಕದೊಳಗೆ ಇತರೆ ದಾಖಲಾತಿಗಳೊಂದಿಗೆ ವಿಭಾಗೀಯ ಕಛೇರಿಗೆ ಸಲ್ಲಿಸಬೇಕು.

15) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಿಟ್ಟ ಮಳಿಗೆಗಳಲ್ಲಿ, ಒಬ್ಬ ಬಿಡ್‌ದಾರರು ಒಂದು ಮಳಿಗೆಯನ್ನು ಮಾತ್ರ ಮೀಸಲಾತಿ ಆಧಾರದ ಮೇಲೆ ಪಡೆಯಲು ಅವಕಾಶವಿದೆ. ನಾಲ್ಕು ರಾಜ್ಯ ಸಾರಿಗೆ ನಿಗಮ / ಸಂಸ್ಥೆ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿ ಮತ್ತು ಇತರೆ ಸರ್ಕಾರಿ ಇಲಾಖೆಗಳಲ್ಲಿ ಯಾವುದೇ ಮಳಿಗೆ / ಜಾಹೀರಾತು ಪರವಾನಗಿಯನ್ನು ಮೀಸಲಾತಿ ಆಧಾರದ ಮೇಲೆ ಪಡೆದಿರುವುದಿಲ್ಲ ಎಂಬ ಬಗ್ಗೆ ಸ್ವಯಂ-ದೃಢೀಕರಣವನ್ನು ಬಿಡ್‌ದಾರರು ಇ-ಟೆಂಡರ್‌ನಲ್ಲಿ ನಿಗಧಿತ ಅವಧಿಯಲ್ಲಿ ಅಪ್‌ಲೋಡ್ ಮಾಡಬೇಕು. ಈ ನಿಯಮವನ್ನು ಬಿಡ್‌ದಾರರು ಉಲ್ಲಂಘಿಸಿರುವುದು, ಯಾವುದೇ ಹಂತದಲ್ಲಿ ಕಂಡು ಬಂದಲ್ಲಿ, ಇ.ಎಂ.ಡಿ./ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಆಯ್ಕೆ / ಕರಾರನ್ನು ರದ್ದುಗೊಳಿಸಲಾಗುವುದು.

16) ಅಂಧರು ಮತ್ತು ವಿಕಲಚೇತನರಿಗೆ ಮೀಸಲಿಟ್ಟ ಮಳಿಗೆಗಳನ್ನು, ಒಬ್ಬ ಬಿಡ್‌ದಾರರು ಒಂದು ಮಳಿಗೆಯನ್ನು ಮಾತ್ರ ಮೀಸಲಾತಿ ಆಧಾರದ ಮೇಲೆ ಪಡೆಯಲು ಅವಕಾಶವಿದೆ. ನಾಲ್ಕು ರಾಜ್ಯ ಸಾರಿಗೆ ನಿಗಮ / ಸಂಸ್ಥೆ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿ ಮತ್ತು ಇತರೆ ಸರ್ಕಾರಿ ಇಲಾಖೆಗಳಲ್ಲಿ ಯಾವುದೇ ಮಳಿಗೆಗಳ ಪರವಾನಗಿಯನ್ನು ಮೀಸಲಾತಿ ಆಧಾರದ ಮೇಲೆ ಪಡೆದಿರುವುದಿಲ್ಲ ಎಂಬ ಬಗ್ಗೆ ಸ್ವಯಂ-ದೃಢೀಕರಣವನ್ನು ಬಿಡ್‌ದಾರರು ಇ-ಟೆಂಡರ್‌ನಲ್ಲಿ ನಿಗಧಿತ ಅವಧಿಯಲ್ಲಿ ಅಪ್‌ಲೋಡ್ ಮಾಡಬೇಕು ಈ ನಿಯಮವನ್ನು ಬಿಡ್‌ದಾರರು ಉಲ್ಲಂಘಿಸಿರುವುದು ಯಾವುದೇ ಹಂತದಲ್ಲಿ ಕಂಡು ಬಂದಲ್ಲಿ, ಇ.ಎಂ.ಡಿ / ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಆಯ್ಕೆ / ಕರಾರನ್ನು ರದ್ದುಗೊಳಿಸಲಾಗುವುದು.

17) ಮ್ಯಾನ್ಯುಯಲ್ ಸಂಧಾನದಲ್ಲಿ ನಿಗದಿತ ಮಾಸಿಕ ಪರವಾನಗಿ ಶುಲ್ಕಕ್ಕಿಂತ ಹೆಚ್ಚಿನ ಮೊತ್ತವನ್ನು H1 ಮತ್ತು H2 ಬಿಡ್‌ದಾರರು ನಮೂದಿಸಿದ ಸಂದರ್ಭದಲ್ಲಿ, H1 ಬಿಡ್‌ದಾರರು ಕರಾರು ಒಪ್ಪಂದ ಮಾಡಿಕೊಳ್ಳುವಲ್ಲಿ ಹಿಂದೆ ಸರಿದಲ್ಲಿ / ವಿಫಲರಾದಲ್ಲಿ, ಸದರಿಯವರ ಇ.ಎಂ.ಡಿ.ಯನ್ನು ಮುಟ್ಟುಗೋಲು ಹಾಕಿಕೊಂಡ ನಂತರ H2 ಬಿಡ್‌ದಾರರನ್ನು ಪರವಾನಗಿದಾರರಾಗಿ ಆಯ್ಕೆ ಮಾಡುವ ಹಕ್ಕನ್ನು ನಿಗಮವು ಕಾಯ್ದಿರಿಸಿದೆ.

18) ಆಯ್ಕೆಯಾದ ಬಿಡ್‌ದಾರರು, ಆಯ್ಕೆ ಪತ್ರ ತಲುಪಿದ ದಿನಾಂಕದಿಂದ 07 ದಿನಗಳೊಳಗಾಗಿ ನಿಗದಿತ ಭದ್ರತಾ ಠೇವಣಿ ಮತ್ತು ಒಂದು ತಿಂಗಳ ಮುಂಗಡ ಮಾಸಿಕ ಪರವಾನಗಿ ಶುಲ್ಕವನ್ನು ಪಾವತಿಸಿ, ಸೂಕ್ತ ಮೌಲ್ಯದ ಛಾಪಾ ಕಾಗದದ ಮೇಲೆ ಕರಾರು ಒಪ್ಪಂದ ಮಾಡಿಕೊಳ್ಳಬೇಕು.

19) ಆಯ್ಕೆಯಾದ ಬಿಡ್‌ದಾರರು, ಆಯ್ಕೆ ಪತ್ರ ತಲುಪಿದ 07 ದಿನಗಳೊಳಗೆ ಕರಾರು ಒಪ್ಪಂದ ಮಾಡಿಕೊಳ್ಳುವಲ್ಲಿ ವಿಫಲರಾದಲ್ಲಿ, ಅಂತಹ ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು ನಿಗಮಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು.

20) ಪರವಾನಗಿದಾರರು ಪ್ರತಿ ಮಾಹೆ 07 ನೇ ತಾರೀಖಿನೊಳಗಾಗಿ ಮಾಸಿಕ ಪರವಾನಗಿ ಶುಲ್ಕ ಮತ್ತು ಸರಕು & ಸೇವಾ ತೆರಿಗೆ ಶುಲ್ಕವನ್ನು, ಪ್ರಸ್ತುತ ಶೇ.18, ಮುಂಗಡವಾಗಿ ನಿಗಮಕ್ಕೆ ಪಾವತಿಸಬೇಕು.

21) ಆಯ್ಕೆಗೊಂಡ ಪರವಾನಗಿದಾರರು ಮಾಸಿಕ ಪರವಾನಗಿ ಶುಲ್ಕ ಮತ್ತು ಸರಕು ಮತ್ತು ಸೇವಾ ತೆರಿಗೆ ಪಾವತಿಸಲು ಇನ್‌ವಾಯ್ಸ್ ಅನ್ನು ಪ್ರತಿ ತಿಂಗಳ 1ನೇ ತಾರೀಖಿನೊಳಗೆ ಸಂಬಂಧಪಟ್ಟ ಘಟಕ/ವಿಭಾಗೀಯ ಕಛೇರಿಯಲ್ಲಿ ಪಡೆಯುವುದು.

22) ಇನ್‌ವಾಯ್ಸ್‌ನಲ್ಲಿ ನಮೂದಿಸಿದ ಪೂರ್ಣ ಮೊತ್ತವನ್ನು ಪರವಾನಗಿದಾರರು ಪಾವತಿಸಬೇಕಿರುತ್ತದೆ. ಒಂದು ವೇಳೆ ಇನ್‌ವಾಯ್ಸ್ ಮೊತ್ತ ಪಾವತಿಸಲು ಪರವಾನಗಿದಾರರು ತಡಮಾಡಿದಲ್ಲಿ, ಬಾಕಿ ಪರವಾನಗಿ ಶುಲ್ಕ ಮತ್ತು ಸರಕು & ಸೇವಾ ತೆರಿಗೆ ಮೇಲೂ ವಾರ್ಷಿಕ ಶೇ.18 ರಷ್ಟು ಬಡ್ಡಿಯನ್ನು ಕನಿಷ್ಠ ರೂ.100/- ರಂತೆ, ವಿಳಂಬದ ದಿನಗಳ ಲೆಕ್ಕದಲ್ಲಿ ಸಂದಾಯ ಮಾಡಬೇಕು.

23) ಮಾಸಿಕ ಪರವಾನಗಿ ಶುಲ್ಕವು ಪ್ರತಿ ವರ್ಷ ಶೇ.10% ರಷ್ಟು ಹೆಚ್ಚಳವಾಗುವುದು. ಇದಕ್ಕನುಗುಣವಾಗಿ ಸರಕು & ಸೇವಾ ತೆರಿಗೆಯು ಹೆಚ್ಚಳವಾಗುವುದು.

24) ನಿಗಮದ ಕೊಳವೆ ಬಾವಿಗಳಿಂದ ನೀರಿನ ಸೌಲಭ್ಯವನ್ನು ಕಲ್ಪಿಸಿರುವಂತಹ ಮಳಿಗೆಗಳ ಪರವಾನಗಿದಾರರು ಮಾಸಿಕ ಪರವಾನಗಿ ಶುಲ್ಕದ ಶೇ.2%ರಷ್ಟು ಅಥವಾ ಕೊಳವೆ ಬಾವಿಯ ವಿದ್ಯುತ್ ಬಿಲ್ಲಿನ ಶೇ.50 ರಷ್ಟು, ಇದರಲ್ಲಿ ಯಾವುದು ಹೆಚ್ಚಿನದು, ಆ ಮೊತ್ತವನ್ನು ಪಾವತಿಸಬೇಕು.

25) ಒಂದು ವೇಳೆ ಮಳಿಗೆಗಳಿಗೆ ಜಲಮಂಡಳಿ/ಸಂಬಂಧಿಸಿದ ಇಲಾಖೆಗಳಿಂದ ಪ್ರತ್ಯೇಕವಾಗಿ ನೀರಿನ ಮೀಟರ್ ಅಳವಡಿಸಿದ್ದಲ್ಲಿ, ಅಂತಹ ಮಳಿಗೆಯ ಪರವಾನಗಿದಾರರು ಅನ್ವಯಿಸುವ ನೀರಿನ ಶುಲ್ಕವನ್ನು ಸಂಬಂಧಿಸಿದ ಇಲಾಖೆಗೆ ಪಾವತಿಸಬೇಕು.

26) ಪ್ರತಿ ಮಾಹೆಯ ವಿದ್ಯುಚ್ಛಕ್ತಿ ಹಾಗೂ ನೀರಿನ ಬಿಲ್ಲುಗಳನ್ನು ನಿಗದಿತ ಸಮಯದಲ್ಲಿ ಪಾವತಿಸಬೇಕು.

27) ಒಂದು ವೇಳೆ ನಿಗಮದ ವತಿಯಿಂದ ನೀರಿನ ಸರಬರಾಜು ಮಾಡಲು ಸಾಧ್ಯವಾಗದಿದ್ದಲ್ಲಿ, ಪರವಾನಗಿದಾರರು ತಮ್ಮ ಸ್ವಂತ ಖರ್ಚಿನಲ್ಲಿ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಿರುತ್ತದೆ.

ಮುಂದುವರೆದಂತೆ-3

೨೮) ಪರವಾನಗಿದಾರರು ಕೊಳವೆ ಬಾವಿ (Borewell) ಕೊರೆಸಲು ಅನುಮತಿ ಕೋರಿದಲ್ಲಿ, ಸ್ಥಳೀಯ ಸಂಸ್ಥೆಗಳ ನಿಯಮಾವಳಿಗಳು, ವಾಣಿಜ್ಯ ಸ್ಥಳ, ಬಸ್ ನಿಲ್ದಾಣದಲ್ಲಿ ಹಾಲಿ ಇರುವಂತಹ ಬೋರ್‌ವೆಲ್‌ಗಳ ಆಧಾರದಲ್ಲಿ ನಿರ್ಧರಿಸಲಾಗುವುದು. ನಿಗಮದ ತೀರ್ಮಾನಕ್ಕೆ ಪರವಾನಗಿದಾರರು ಬದ್ಧರಾಗಿರಬೇಕು.

೨೯) ಪರವಾನಗಿದಾರರು ಟೆಂಡರ್ / ಕರಾರು ಒಪ್ಪಂದದಲ್ಲಿ ನಮೂದಿಸಿದ ಸ್ಥಳದ ವಿಸ್ತೀರ್ಣಕ್ಕಿಂತ ಆ ವಾಣಿಜ್ಯ ಮಳಿಗೆಗೆ ಹೊಂದಿಕೊಂಡಂತೆ ಇರುವ ಹೆಚ್ಚುವರಿ ಸ್ಥಳವನ್ನು ಬಳಸಲು ಉದ್ದೇಶಿಸಿ, ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಮನವಿ ನೀಡಿದಲ್ಲಿ, ಟೆಂಡರ್ / ಕರಾರು ಒಪ್ಪಂದದಲ್ಲಿ ನಮೂದಿಸಿದ ವಿಸ್ತೀರ್ಣದ ಶೇ.10%ರಷ್ಟು ವಿಸ್ತೀರ್ಣದ ಸ್ಥಳವನ್ನು, ಪ್ರಸ್ತುತ ಪಾವತಿಸುತ್ತಿರುವ ಪ್ರತಿ ಚ.ಅಡಿ ಪರವಾನಗಿ ಶುಲ್ಕದ 1.5 ಪಟ್ಟು ಮೊತ್ತವನ್ನು ಮಾಸಿಕ ಪರವಾನಗಿ ಶುಲ್ಕವನ್ನಾಗಿ ನಿಗದಿಪಡಿಸಲಾಗುವುದು. ಹೆಚ್ಚುವರಿ ಸ್ಥಳಾವಕಾಶ ಬಳಸಿಕೊಂಡು ಪ್ರತ್ಯೇಕ ಮಳಿಗೆ, ಕೌಂಟರ್, ವ್ಯವಹಾರ ಮಾಡಲು ಅವಕಾಶವಿರುವುದಿಲ್ಲ.

೩೦) <u>ಅನಧಿಕೃತವಾಗಿ ಹೆಚ್ಚುವರಿ ಸ್ಥಳಾವಕಾಶದ ಬಳಕೆ:-</u> ಪರವಾನಗಿದಾರರು ಅನಧಿಕೃತವಾಗಿ ಬಳಸಿದ ಹೆಚ್ಚುವರಿ ಸ್ಥಳಾವಕಾಶವನ್ನು ನೋಟಿಸ್ ನೀಡಿದ ಕೂಡಲೇ ತೆರವುಗೊಳಿಸಬೇಕು. ಇದಲ್ಲದೆ, ಪರವಾನಗಿದಾರರಿಗೆ ಕೆಳಕಂಡಂತೆ ದಂಡ ವಿಧಿಸಲಾಗುವುದು ಹಾಗೂ ಕರಾರನ್ನು ರದ್ದುಗೊಳಿಸಲು ಕ್ರಮ ಕೈಗೊಳ್ಳುವುದು.

| | | |
|---|---|---|
| ಮೊದಲ ಬಾರಿಗೆ | ಉಪಯೋಗಿಸಿದ ಹೆಚ್ಚುವರಿ ಸ್ಥಳಕ್ಕೆ ಮಾಸಿಕ ಪರವಾನಗಿ ಶುಲ್ಕದ ೩ ಪಟ್ಟು ಪ್ರೋರೇಟಾ ದರಕ್ಕನುಗುಣವಾಗಿ ದಂಡ ವಿಧಿಸಲಾಗುವುದು. | ದಂಡವನ್ನು ಕನಿಷ್ಠ 1 ತಿಂಗಳು, ಗರಿಷ್ಠ ಉಪಯೋಗಿಸಿದ ಒಟ್ಟು ದಿನಗಳಿಗೆ ವಿಧಿಸಲಾಗುವುದು. |
| ಎರಡನೇ ಬಾರಿಗೆ ಹಾಗೂ ಪುನರಾವರ್ತ-ನೆಗೊಂಡಲ್ಲಿ | ಉಪಯೋಗಿಸಿದ ಹೆಚ್ಚುವರಿ ಸ್ಥಳಕ್ಕೆ ಮಾಸಿಕ ಪರವಾನಗಿ ಶುಲ್ಕದ 5 ಪಟ್ಟು ಪ್ರೋರೇಟಾ ದರಕ್ಕನುಗುಣವಾಗಿ ದಂಡ ವಿಧಿಸಲಾಗುವುದು. ಇದಲ್ಲದೆ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು, ಕರಾರನ್ನು ರದ್ದುಪಡಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ. | ದಂಡವನ್ನು ಕನಿಷ್ಠ 1 ತಿಂಗಳು, ಗರಿಷ್ಠ ಉಪಯೋಗಿಸಿದ ಒಟ್ಟು ದಿನಗಳಿಗೆ ವಿಧಿಸಲಾಗುವುದು. |

೩೧) ಪರವಾನಗಿ ಪಡೆದ ಮಳಿಗೆಗಳಲ್ಲಿ ಟೆಂಡರ್‌ನಲ್ಲಿ ನಿಗದಿಪಡಿಸಿದ ವ್ಯವಹಾರವನ್ನು ಹೊರತುಪಡಿಸಿ ಇತರೆ ವ್ಯವಹಾರವನ್ನು ನಡೆಸಲು ಅವಕಾಶವಿರುವುದಿಲ್ಲ.

೩೨) ಜನರಲ್ ಸ್ಟಾಲ್‌ಗಳಿಗೆ ಆಯ್ಕೆಯಾದ ಪರವಾನಗಿದಾರರು, ಈ ಕೆಳಗಿನ ಪಟ್ಟಿಯಲ್ಲಿ ನಮೂದಿಸಿದ ವಸ್ತು / ಪದಾರ್ಥಗಳನ್ನು ಮಾರಾಟ ಮಾಡಬೇಕಿರುತ್ತದೆ. ಮಾರಾಟ ಮಾಡಲು ನಿಷೇಧಿಸಿದ ವಸ್ತು / ಪದಾರ್ಥಗಳನ್ನು ಮಾರಾಟ ಮಾಡುವಂತಿಲ್ಲ. ಸದರಿ ಪಟ್ಟಿಯ ಹೊರತಾಗಿ ಇರುವ ವಸ್ತುಗಳನ್ನು ಮಾರಾಟ ಮಾಡಬೇಕಿದ್ದಲ್ಲಿ, ಪರವಾನಗಿದಾರರು ಕರಾರಿಗೂ ಮುಂಚಿತವಾಗಿ ನಿಗಮದಿಂದ ಪೂರ್ವಾನುಮತಿ ಪಡೆಯಬೇಕಿರುತ್ತದೆ. ವಿಭಾಗದ ಅಧಿಕಾರಿಗಳು ಅನುಮತಿ ನೀಡುವ ಮುನ್ನ, ಸದರಿ ವಸ್ತುಗಳ ಮಾರಾಟದಿಂದ ಇತರೆ ಮಳಿಗೆಗಳ ವ್ಯವಹಾರಕ್ಕೆ ನಷ್ಟ ಆಗುವುದಿಲ್ಲ, ಎಂಬುದನ್ನು ದೃಢೀಕರಿಸಿಕೊಡಬೇಕು.

| **ಜನರಲ್ ಮಳಿಗೆಯಲ್ಲಿ ಮಾರಾಟ ಮಾಡಬಹುದಾದ ವಸ್ತು / ಪದಾರ್ಥಗಳು** | **ಜನರಲ್ ಮಳಿಗೆಯಲ್ಲಿ ಮಾರಾಟ ಮಾಡಲು ನಿಷೇಧಿಸಿರುವ ವಸ್ತು / ಪದಾರ್ಥಗಳು** |
|---|---|
| ಪುಸ್ತಕ / ದಿನಪತ್ರಿಕೆ / ನಿಯತಕಾಲಿಕೆಗಳು ಮತ್ತು ಸ್ಟೇಷನರಿ ವಸ್ತುಗಳು, ಮಾರ್ಜಕ / ಸಾಬೂನುಗಳು ಹಣ್ಣು / ಹೂಗಳು, ಜೆರಾಕ್ಸ್, ಪ್ಯಾಕ್ ಆಗಿರುವ ಬಿಸ್ಕೆಟ್ಸ್ / ಜ್ಯೂಸ್, ಬೇಕರಿ ತಿನಿಸುಗಳು, ನೀರಿನ ಬಾಟಲ್, ಮೊಬೈಲ್ ಕರೆನ್ಸಿ, ಸೌಂದರ್ಯವರ್ಧಕಗಳು, ಅಲಂಕಾರಿಕ ವಸ್ತುಗಳು, ಕೊಡುಗೆ ನೀಡುವ ವಸ್ತುಗಳು, ಫ್ಯಾನ್ಸಿ ಸ್ಟೋರ್‌ನಲ್ಲಿ ಮಾರಾಟ ಮಾಡುವ ವಸ್ತುಗಳು,<br>**ಈ ಮಳಿಗೆಗಳಲ್ಲಿ ಗ್ಯಾಸ್ / ಸ್ಟೌವ್ ಬಳಕೆಗೆ ಅವಕಾಶವಿಲ್ಲ.** | ಬೇಯಿಸಿದ ಪದಾರ್ಥಗಳಾದ ಕಾಫಿ, ಟೀ, ಉಪಹಾರ, ಊಟ, ಹಾಲು ಇತ್ಯಾದಿಗಳು, ಔಷಧಿಗಳು, ದೂರವಾಣಿ ಬೂತ್, ನಾಣ್ಯ ಚಾಲಿತ ಮಾನವ ತೂಕದ ಯಂತ್ರ, ಕಾನೂನು ಬಾಹಿರವಾಗಿರುವ ಪಟಾಕಿ, ಗನ್ನುಗಳು, ಸಿಡಿಮದ್ದುಗಳು, ತಂಬಾಕುಯುಕ್ತ ಪದಾರ್ಥಗಳು, ಮದ್ಯದ ಮಾರಾಟ, ಸೀಮೆಎಣ್ಣೆ, ಡೀಸೆಲ್, ಪೆಟ್ರೋಲ್ - ಗ್ಯಾಸ್, ಗ್ಯಾಸ್ ಸಿಲಿಂಡರ್, ಟ್ರಾವೆಲ್ / ಟ್ರಾನ್ಸ್‌ಪೋರ್ಟ್ ಏಜೆನ್ಸಿ, ಟಿಕೆಟ್ ಬುಕಿಂಗ್, ಇತ್ಯಾದಿ ಕಾನೂನು ಮತ್ತು ನಿಗಮದ ವತಿಯಿಂದ ನಿಷೇಧಿಸಲ್ಪಟ್ಟ ಹಾಗೂ ಮುಂದೆ ನಿಷೇಧಿಸಲ್ಪಡುವ ವಸ್ತುಗಳು. |

೩೩) ನಿಗದಿತ ದರದಲ್ಲಿ ಮಾರಾಟ **(MRP rate):-** ವಾಣಿಜ್ಯ ಮಳಿಗೆಗಳಲ್ಲಿ ಪರವಾನಗಿದಾರರು ಮಾರಾಟ ಮಾಡುವ ವಸ್ತುಗಳನ್ನು, ಅವುಗಳ ಮೇಲೆ ನಮೂದಿಸಲಾದ ಗರಿಷ್ಠ ಮೊತ್ತಕ್ಕೆ / MRP (Maximum Retail Price) ಮೀರದಂತೆ ಮಾರಾಟ ಮಾಡಬೇಕು. ವಸ್ತುಗಳನ್ನು ಹೆಚ್ಚಿನ ದರದಲ್ಲಿ ಮಾರಾಟ ಮಾಡುತ್ತಿರುವುದು ನಿಗಮದ ಗಮನಕ್ಕೆ ಬಂದಲ್ಲಿ, ಅಂತಹ ಪರವಾನಗಿದಾರರಿಗೆ ಮೊದಲ ಪ್ರಕರಣಕ್ಕೆ ರೂ.೫೦೦/-, ೨ನೇ ಪ್ರಕರಣಕ್ಕೆ ರೂ.೧,೦೦೦/- ಮತ್ತು ೩ನೇ ಪ್ರಕರಣಕ್ಕೆ ರೂ.೨,೦೦೦/- ದಂಡ ವಿಧಿಸಲಾಗುವು. ಇದು ಪುನರಾವರ್ತನೆಗೊಂಡಲ್ಲಿ, ರೂ.೨,೦೦೦/- ದಂಡ ವಿಧಿಸುವ ಅಥವಾ ಕರಾರನ್ನು ರದ್ದುಪಡಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.

೩೪) ಪರವಾನಗಿದಾರರು ಠೇವಣಿ ಇರಿಸುವ ವಸ್ತುಗಳಿಗೆ ಬೆಂಕಿ ತಗುಲದಂತೆ ಅಗ್ನಿರಕ್ಷಕ ಉಪಕರಣಗಳ ವ್ಯವಸ್ಥೆ ಮಾಡಿಕೊಳ್ಳುವುದು.

೩೫) ಪರವಾನಗಿದಾರರು ನಿಗದಿಪಡಿಸಿದ ದರಗಳನ್ನು ಮಾತ್ರ ಪಡೆದುಕೊಳ್ಳುವುದು. ಒಂದು ವೇಳೆ ನಿಗದಿತ ದರಕ್ಕಿಂತ ಹೆಚ್ಚಿನ ದರಗಳನ್ನು ಪರವಾನಗಿದಾರರು ಪಡೆಯುತ್ತಿರುವುದು ನಿಗಮದ ಗಮನಕ್ಕೆ ಬಂದಲ್ಲಿ, ಅಂತಹ ಪರವಾನಗಿದಾರರಿಗೆ ಮೊದಲ ಪ್ರಕರಣಕ್ಕೆ ರೂ.೫೦೦/-, ೨ ನೇ ಪ್ರಕರಣಕ್ಕೆ ರೂ.೧,೦೦೦/- ಮತ್ತು ೩ ನೇ ಪ್ರಕರಣಕ್ಕೆ ರೂ.೨,೦೦೦/- ದಂಡ ವಿಧಿಸುವುದು. ಇದು ಪುನರಾವರ್ತನೆಗೊಂಡಲ್ಲಿ ರೂ.೨,೦೦೦/- ದಂಡ ವಿಧಿಸುವ ಅಥವಾ ಕರಾರನ್ನು ರದ್ದುಪಡಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.

ಮುಂದುವರೆದಂತೆ-4

36) ಇತರೆ ಮಳಿಗೆಗಳ ಪರವಾನಗಿದಾರರಿಗೆ ಅನ್ವಯವಾಗುವ ನಿಯಮ / ನಿಬಂಧನೆಗಳು ಈ ಮಳಿಗೆಯ ಪರವಾನಗಿದಾರರಿಗೂ ಅನ್ವಯವಾಗಲಿದೆ.

37) ಯಾವುದೇ ಕಾರಣ ನೀಡದೇ, 4 ತಿಂಗಳ ನೋಟಿಸ್ ನೀಡಿ ಮಳಿಗೆಯ ಪರವಾನಗಿಯನ್ನು ರದ್ದುಪಡಿಸಲು ನಿಗಮವು ಅಧಿಕಾರವನ್ನು ಹೊಂದಿರುತ್ತದೆ.

38) ಪರವಾನಗಿ ಪಡೆದ ಅವಧಿಯಿಂದ ಒಂದು ವರ್ಷದ ಒಳಗೆ ಪರವಾನಗಿದಾರರು, 6 ತಿಂಗಳ ಮಾಸಿಕ ಪರವಾನಗಿ ಶುಲ್ಕವನ್ನು ಮುಂಗಡವಾಗಿ ಪಾವತಿಸಿ, ತಮ್ಮ ಪರವಾನಗಿಯನ್ನು ರದ್ದುಪಡಿಸಿಕೊಳ್ಳಬಹುದು.

39) ಒಂದು ವರ್ಷದ ನಂತರ ಪರವಾನಗಿಯನ್ನು ರದ್ದುಪಡಿಸಿಕೊಳ್ಳಲು ಪರವಾನಗಿದಾರರು ಇಚ್ಛಿಸಿದಲ್ಲಿ, 4 ತಿಂಗಳ ಮಾಸಿಕ ಪರವಾನಗಿ ಶುಲ್ಕವನ್ನು ಮುಂಗಡವಾಗಿ ನಿಗಮಕ್ಕೆ ಪಾವತಿಸಿ, ತಮ್ಮ ಪರವಾನಗಿಯನ್ನು ರದ್ದುಪಡಿಸಿಕೊಳ್ಳಬಹುದು.

40) ಮಾಸಿಕ ಪರವಾನಗಿ ಶುಲ್ಕ, ಸರಕು & ಸೇವಾ ತೆರಿಗೆ ಮತ್ತು ಇತರೆ ಶುಲ್ಕಗಳನ್ನು ಸತತವಾಗಿ 2 ತಿಂಗಳು ಪಾವತಿಸದೇ ಬಾಕಿ ಉಳಿಸಿಕೊಂಡಲ್ಲಿ, ಅಂತಹ ಮಳಿಗೆಗಳ ಪರವಾನಗಿಯನ್ನು ನಿಗಮದ ವತಿಯಿಂದ ರದ್ದುಪಡಿಸಿ, ಪರವಾನಗಿದಾರರು ನಿಗಮದಲ್ಲಿಟ್ಟಿರುವ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಕೈಗೊಳ್ಳುವುದು.

41) ಟೆಂಡರ್‌ನಲ್ಲಿ ಅರ್ಹಗೊಳ್ಳುವ ಸಲುವಾಗಿ ಬಿಡ್‌ದಾರರು / ಪರವಾನಗಿದಾರರು ಸಲ್ಲಿಸಿರುವ ದಾಖಲೆಗಳು ಯಾವುದೇ ಹಂತದಲ್ಲಿ ನೈಜತೆಯಿಂದ ಕೂಡಿಲ್ಲದಿರುವುದು ಕಂಡುಬಂದಲ್ಲಿ, ಅಂತಹ ಬಿಡ್‌ದಾರರ ಆಯ್ಕೆ / ಪರವಾನಗಿದಾರರ ಪರವಾನಗಿಯನ್ನು ರದ್ದುಪಡಿಸಿ, ನಿಗಮದಲ್ಲಿಟ್ಟಿರುವ ಇ.ಎಂ.ಡಿ. / ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳುವುದು. ಅಂತಹ ಬಿಡ್‌ದಾರರನ್ನು / ಪರವಾನಗಿದಾರರನ್ನು ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ.ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಲಾಗುವುದು.

42) ಬಿಡ್‌ದಾರರು ಬಿಡ್ ಹಿಂದಕ್ಕೆ ಪಡೆದಲ್ಲಿ ಅಥವಾ ತಿದ್ದುಪಡಿಗೊಳಿಸಿದಲ್ಲಿ ಅಥವಾ ಅಗೌರವ ತರುವಂತಹ ಸಂದರ್ಭಗಳಲ್ಲಿ, ಇ.ಎಂ.ಡಿ. ಮೊತ್ತ ಮುಟ್ಟುಗೋಲು ಹಾಕಿಕೊಂಡು, ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ. ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಲಾಗುವುದು.

43) ಒಂದು ವರ್ಷದ ಅವಧಿಯೊಳಗೆ ಯಾವುದೇ ಕಾರಣದಿಂದ ಪರವಾನಗಿ ರದ್ದುಗೊಳ್ಳುವಂತಹ ಮತ್ತು ಒಂದು ವರ್ಷದ ಅವಧಿಯೊಳಗೆ ಪರವಾನಗಿಯನ್ನು ರದ್ದುಪಡಿಸುವಂತೆ ಮನವಿ ಸಲ್ಲಿಸುವ ಪರವಾನಗಿದಾರರನ್ನು, ಮನವಿ ಸಲ್ಲಿಸಿದ ದಿನಾಂಕದಿಂದ ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ. ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಕಪ್ಪುಪಟ್ಟಿಗೆ ಸೇರಿಸಲಾಗುವುದು.

44) ಪರವಾನಗಿ ಅವಧಿಯ ಯಾವುದೇ ಸಮಯದಲ್ಲಿ ಮಳಿಗೆಯನ್ನು ಉಪ-ಪರವಾನಗಿಗೆ ನೀಡಿರುವುದು ಕಂಡು ಬಂದಲ್ಲಿ, ಪರವಾನಗಿಯನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ರದ್ದುಪಡಿಸುವುದು ಹಾಗೂ ಭದ್ರತಾ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವುದು. ಕರಾರು ರದ್ದುಪಡಿಸಿದ ದಿನಾಂಕದಿಂದ ಮುಂದಿನ 02 ವರ್ಷಗಳ ಅವಧಿಗೆ ಕ.ರಾ.ರ.ಸಾ.ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಸದರಿ ಪರವಾನಗಿದಾರರನ್ನು ಕಪ್ಪುಪಟ್ಟಿಗೆ ಸೇರಿಸಲಾಗುವುದು.

45) ಕಪ್ಪು ಪಟ್ಟಿಗೆ ಸೇರಿದ ಪರವಾನಗಿದಾರರು ನಿಗಮದ ಯಾವುದೇ ಟೆಂಡರ್ / ಸಂಧಾನದಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಒಂದು ವೇಳೆ ಟೆಂಡರ್ / ಸಂಧಾನದಲ್ಲಿ ಭಾಗವಹಿಸಿದಲ್ಲಿ, ಅವರ ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವುದು.

46) ಪರವಾನಗಿ ಪಡೆದ ಪರವಾನಗಿದಾರರೇ ಮಳಿಗೆಯನ್ನು ನಡೆಸುವುದು. ಮಳಿಗೆಗಳನ್ನು ಉಪ ಪರವಾನಗಿಗೆ ನೀಡಲು ಅವಕಾಶವಿರುವುದಿಲ್ಲ.

47) ಮುಷ್ಕರ / ಬಂದ್ ಅವಧಿಯಲ್ಲಿ ಮಾಸಿಕ ಪರವಾನಗಿ ಶುಲ್ಕದಲ್ಲಿ ರಿಯಾಯಿತಿಗೆ ಅವಕಾಶವಿರುವುದಿಲ್ಲ.

48) ಪರವಾನಗಿದಾರರು ತಮ್ಮ ವ್ಯವಹಾರಕ್ಕೆ ಸಂಬಂಧಿಸಿದ ಜಿ.ಎಸ್.ಟಿ., ಆದಾಯ ತೆರಿಗೆ, ಭವಿಷ್ಯ ನಿಧಿ, ಇ.ಎಸ್.ಐ, ಸೇಲ್ಸ್ ಟ್ಯಾಕ್ಸ್ ಕ್ಲಿಯರೆನ್ಸ್ ಪ್ರಮಾಣ ಪತ್ರ, ಟ್ರೇಡ್ ಲೈಸೆನ್ಸ್, ಲೇಬರ್ ಲೈಸೆನ್ಸ್, ಫುಡ್ ಲೈಸೆನ್ಸ್ ಇತ್ಯಾದಿ ಪ್ರಮಾಣಪತ್ರಗಳನ್ನು ಹೊಂದಿರಬೇಕು.

49) ಆಯ್ಕೆಗೊಂಡ ಪರವಾನಗಿದಾರರು, ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆ (Employees Provident Fund Organisation) ರವರಲ್ಲಿ ನೋಂದಣಿ ಮಾಡಿಸಿಕೊಂಡಿರಬೇಕು. ನಿಗಮದ ವಾಣಿಜ್ಯ ಮಳಿಗೆಗಳಲ್ಲಿ ತಮ್ಮ ವ್ಯವಹಾರದ ಸಲುವಾಗಿ ಬಳಸಿಕೊಳ್ಳುವ ನೌಕರರು / ಸಿಬ್ಬಂದಿಗಳಿಗೆ ಪ್ರತಿ ತಿಂಗಳು ಮಾಸಿಕ ಭವಿಷ್ಯ ನಿಧಿ ವಂತಿಕೆಯನ್ನು ಆರ್.ಪಿ.ಎಫ್.ಸಿ. ರವರಿಗೆ ಜಮಾ ಮಾಡಬೇಕು. ಸಂಬಂಧಿಸದಿದ್ದಲ್ಲಿ, ಸ್ವಯಂ ಘೋಷಣಾ ಪತ್ರವನ್ನು ಸಲ್ಲಿಸುವುದು.

50) ಆಯ್ಕೆಗೊಂಡ ಪರವಾನಗಿದಾರರು, ನಿಗಮದ ವಾಣಿಜ್ಯ ಮಳಿಗೆಗಳಲ್ಲಿ ತಮ್ಮ ವ್ಯವಹಾರದ ಸಲುವಾಗಿ ಬಳಸಿಕೊಳ್ಳುವ ನೌಕರರು / ಸಿಬ್ಬಂದಿಗಳಿಗೆ ಕಾರ್ಮಿಕ ಇಲಾಖೆಯ ನಿಯಮಾವಳಿಗಳನ್ವಯ ಪಿ.ಎಫ್ / ಇಎಸ್ಐ ಸೌಲಭ್ಯ ವಿಸ್ತರಿಸಿರುವ ಬಗ್ಗೆ ಅಗತ್ಯ ದಾಖಲಾತಿ ಒದಗಿಸುವುದು. ಸಂಬಂಧಿಸದಿದ್ದಲ್ಲಿ, ಸ್ವಯಂ ಘೋಷಣಾ ಪತ್ರವನ್ನು ಸಲ್ಲಿಸುವುದು.

51) ಸ್ಥಳೀಯ ಇಲಾಖೆ / ಪ್ರಾಧಿಕಾರಗಳು ವಿಧಿಸುವ ತೆರಿಗೆಯನ್ನು ಪರವಾನಗಿದಾರರೇ ಸಂಬಂಧಿಸಿದ ಇಲಾಖೆ / ಪ್ರಾಧಿಕಾರಗಳಿಗೆ ಸಂದಾಯ ಮಾಡಬೇಕು.

52) ನಿಗಮದ ವ್ಯವಹಾರಕ್ಕೆ ವ್ಯತಿರಿಕ್ತ ಪರಿಣಾಮ ಉಂಟುಮಾಡುವ ವ್ಯವಹಾರವನ್ನು, ನಿಗಮದ ವತಿಯಿಂದ ನಿಷೇದಿಸಲ್ಪಟ್ಟ, ಮುಂದೆ ನಿಷೇಧಿಸಲ್ಪಡುವ ವಸ್ತುಗಳು ಮತ್ತು ಕಾನೂನುಬಾಹಿರ ವಸ್ತುಗಳ ಮಾರಾಟವನ್ನು ಮಳಿಗೆಗಳಲ್ಲಿ ನಿಷೇಧಿಸಲಾಗಿದೆ. ಈ ರೀತಿಯ ವಸ್ತುಗಳ ಮಾರಾಟ ಕಂಡುಬಂದಲ್ಲಿ, ಪರವಾನಗಿಯನ್ನು ರದ್ದುಪಡಿಸಲಾಗುವುದು.

53) ಆಯ್ಕೆಗೊಂಡ ಪರವಾನಗಿದಾರರು ನಿಗಮದ ವಾಣಿಜ್ಯ ಮಳಿಗೆಗಳಲ್ಲಿ ಅಗ್ನಿ ರಕ್ಷಕ / ಶಾಮಕ ಉಪಕರಣಗಳನ್ನು ಕಡ್ಡಾಯವಾಗಿ ಅಳವಡಿಸುವುದು. ಅಗ್ನಿ ಅವಘಡ ಹಾಗೂ ಇತರೆ ನೈಸರ್ಗಿಕ ದುರಂತಗಳಿಗೆ ನಿಗಮವು ಜವಾಬ್ದಾರಿಯಾಗಿರುವುದಿಲ್ಲ.

54) ಲಾಡ್ಜಿಂಗ್ & ಡಾರ್ಮಿಟರಿ, ಉಪಹಾರ ಗೃಹ, ಬೇಕರಿ ಮಳಿಗೆಗಳು, ಚಾಟ್ಸ್ ಸೆಂಟರ್ ಇವುಗಳನ್ನು ಹೊರತುಪಡಿಸಿ, ಇತರೆ ಮಳಿಗೆಗಳಲ್ಲಿ ಎಲ್ಲಾ ಮಾದರಿಯ ಸ್ಟೌವ್ / ಗ್ಯಾಸ್ ಬಳಕೆಯನ್ನು ನಿಷೇಧಿಸಲಾಗಿದೆ.

ಮುಂದುವರೆದಂತೆ-5

55) ಯಾವುದೇ ಸಮಯದಲ್ಲಿ ಹೆಚ್ಚಿನ ಷರತ್ತು ಮತ್ತು ನಿಬಂಧನೆಗಳನ್ನು ಕರಾರಿನಲ್ಲಿ ಸೇರಿಸಲು ಮತ್ತು ಮಾರ್ಪಡಿಸಲು ನಿಗಮವು ಅಧಿಕಾರ ಹೊಂದಿರುತ್ತದೆ.

56) ಯಾವುದೇ ಕಾರಣ ನೀಡದೇ ಟೆಂಡರನ್ನು ಪುರಸ್ಕರಿಸುವ / ತಿರಸ್ಕರಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.

57) ನಿಗಮದಿಂದ ಕರೆಯಲಾಗುವ ಯಾವುದೇ ಟೆಂಡರ್ / ಸಂಧಾನವನ್ನು ಯಾವುದೇ ಸಮಯದಲ್ಲಿ ರದ್ದುಪಡಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.

58) ಹರಾಜು/ಟೆಂಡರ್/ಸಂಧಾನ ಪ್ರಕಟಣೆಯಲ್ಲಿ ಆಯ್ಕೆಯಾದವರು ತಮ್ಮ ಸ್ವಂತ ಖರ್ಚಿನಲ್ಲಿ ಕರ್ನಾಟಕ ಸ್ಟಾಂಪ್ ಆಕ್ಟ್ 1957 ಸೆಕ್ಷನ್ 32ಎ (ಎ) (111)ರಲ್ಲಿ ಪರಿಷ್ಕೃತ ಸ್ಟಾಂಪ್ ಅಕ್ಟ್ ನಂ:8/2003ರನ್ವಯ ಸ್ಟಾಂಪ್ ಶುಲ್ಕವನ್ನು ಭರಿಸಿ ಕರಾರು ಮಾಡಿಕೊಳ್ಳಬೇಕಾಗಿರುತ್ತದೆ.

59) ಆಯ್ಕೆಗೊಂಡ ಪರವಾನಗಿದಾರರು ನಿಗಮದ ನಿಯಮಾವಳಿಯ ಪ್ರಕಾರ ಸೂಚಿಸಿರುವ ಪರವಾನಗಿ ಶುಲ್ಕದ 8ರಷ್ಟು ಹಣವನ್ನು ಭದ್ರತಾ ಠೇವಣಿ ಹಣ ಮತ್ತು ಒಂದು ತಿಂಗಳ ಮುಂಗಡ ಮಾಸಿಕ ಪರವಾನಗಿ ಶುಲ್ಕವನ್ನು ಏಳು ದಿನಗಳೊಳಗೆ ವಿಭಾಗೀಯ ಕಛೇರಿಯಲ್ಲಿ ಸಂದಾಯ ಮಾಡಿ ನಿಗಮದೊಂದಿಗೆ ಕರಾರು ಒಪ್ಪಂದವನ್ನು ಮಾಡಿಕೊಳ್ಳಲು ಬದ್ಧರಾಗಿರಬೇಕು. ನಿಗದಿತ ಅವಧಿಯಲ್ಲಿ ಕರಾರು ಒಪ್ಪಂದವನ್ನು ಮಾಡಿಕೊಳ್ಳಲು ವಿಫಲರಾದಲ್ಲಿ ತಾತ್ಕಾಲಿಕ ಪರವಾನಗಿ ಆಯ್ಕೆಯನ್ನು ರದ್ದುಪಡಿಸಿ ತಾವು ಸಲ್ಲಿಸಿರುವ ಇಎಂಡಿ., ಹಣವನ್ನು ಸಂಸ್ಥೆಗೆ ಮುಟ್ಟುಗೋಲು ಮಾಡಿಕೊಳ್ಳಲಾಗುವುದು.

60) ಆಯ್ಕೆಗೊಂಡ ಪರವಾನಿಗಿದಾರರು ಪಾವತಿಸುವ ಮಾಸಿಕ ಪರವಾನಿಗೆ ಶುಲ್ಕದ ಮೇಲೆ ಶೇ.18.00%ರಷ್ಟು ಸೇವಾ ತೆರಿಗೆಯನ್ನು (ಜಿಎಸ್‌ಟಿ ಶುಲ್ಕ) ಪ್ರತಿ ತಿಂಗಳು ಪರವಾನಿಗೆ ಶುಲ್ಕದ ಜೊತೆಗೆ ಪಾವತಿಸಲು ಬದ್ಧರಾಗಿರಬೇಕು.

61) ವಾಣಿಜ್ಯ ಮಳಿಗೆಗಳಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

62) ಕರಾರು ಒಪ್ಪಂದ ಮಾಡಿಕೊಳ್ಳುವ ಸಮಯದಲ್ಲಿ ಸೇಲ್ಸ್ ಟ್ಯಾಕ್ಸ್ ಕ್ಲಿಯರೆನ್ಸ್ ಸರ್ಟಿಫಿಕೇಟ್ ನೀಡುವುದು.

63) ಮಳಿಗೆಯ ನೀರಿನ/ವಿದ್ಯುತ್ ಶುಲ್ಕವನ್ನು ಪ್ರತಿ ತಿಂಗಳು ಪರವಾನಗಿ ಶುಲ್ಕದೊಂದಿಗೆ ಘಟಕದಲ್ಲಿ ಪರವಾನಗಿದಾರರೇ ಪಾವತಿಸುವುದು.

64) ಆಯ್ಕೆಗೊಂಡ ಪರವಾನಿಗೆದಾರರು ಕರಾರು ಒಪ್ಪಂದವನ್ನು ಮಾಡಿಕೊಂಡ ನಂತರವೇ ವಿಫಲರಾದ ಬಿಡ್‌ದಾರರ ಇಎಂಡಿ., ಹಣವನ್ನು ಹಿಂತಿರುಗಿಸಲಾಗುವುದು.

65) ಆಯ್ಕೆಗೊಂಡ ಪರವಾನಗಿದಾರರು ಚಾಲ್ತಿಯಲ್ಲಿರುವ ಮಾಸಿಕ ಪರವಾನಗಿ ಶುಲ್ಕವನ್ನು (ಸೇವಾ ತೆರಿಗೆ ಶುಲ್ಕ/ಇತರೆ ಶುಲ್ಕವನ್ನು ಒಳಗೊಂಡಂತೆ) ಆ ತಿಂಗಳ 07ನೇ ತಾರೀಖಿನೊಳಗೆ ಸಂಬಂಧಪಟ್ಟ ಘಟಕಗಳಲ್ಲಿ ಮುಂಗಡವಾಗಿ ಸಂದಾಯ ಮಾಡಬೇಕು. ಸಂಬಂಧಪಟ್ಟ ಘಟಕಗಳಲ್ಲಿ ಮುಂಗಡವಾಗಿ ಸಂದಾಯ ಮಾಡಬೇಕು.

66) ಆಯ್ಕೆಗೊಂಡ ಪರವಾನಗಿದಾರರು ಅವರ ಸಿಬ್ಬಂದಿಗಳ ಪಿಎಫ್ ಮೊತ್ತವನ್ನು ನಿಯಮಾವಳಿಗಳನ್ವಯ ಕಡಿತಗೊಳಿಸಿ ಸಂಬಂಧಪಟ್ಟ ಇಲಾಖೆಯಲ್ಲಿ ಪಾವತಿಸಿ ದಾಖಲೆಗಳನ್ನು ಪಡೆಯುತ್ತಿರುವ ಬಗ್ಗೆ ಕೆಎಸ್‌ಆರ್‌ಟಿಸಿ., ಅಧಿಕಾರಿಗಳು ಪರಿಶೀಲನೆಗೆ ಕೇಳಿದಾಗ ಪ್ರಸ್ತುತಪಡಿಸಬೇಕಾಗಿರುತ್ತದೆ.

67) ಇ.ಎಸ್.ಐ ಕಾಯ್ದೆಯ ವ್ಯಾಪ್ತಿಯಲ್ಲಿ ಬರುವ ವಾಣಿಜ್ಯ ಮಳಿಗೆಗಳ/ಸ್ಥಳಗಳ ಪರವಾನಗಿದಾರರುಗಳು ಇ.ಎಸ್.ಐ ಕೋಡ್‌ನ್ನು ಹೊಂದಿರಬೇಕು ಮತ್ತು ಅವರುಗಳ ವ್ಯಾಪ್ತಿಯಲ್ಲಿ ಬರುವ ನೌಕರರನ್ನು ಇ.ಎಸ್.ಐ. ವ್ಯಾಪ್ತಿಯಲ್ಲಿ ತರಬೇಕು ಹಾಗೂ ಕಾರ್ಡ್‌ನ್ನು ಕೊಡಿಸಬೇಕು. ನಿಗದಿತ ವಂತಿಗೆಯನ್ನು ಆನ್‌ಲೈನ್‌ನಲ್ಲಿ ಸಲ್ಲಿಸಬೇಕು ಮತ್ತು ಇ.ಎಸ್.ಐ ಸೌಲಭ್ಯಗಳನ್ನು ನೌಕರರಿಗೆ ಹಾಗೂ ಅವರ ಅವಲಂಭಿತರಿಗೆ ಸಿಗುವಂತೆ ಸಹಾಯ ಮಾಡಬೇಕು.

68) ಪರವಾನಗಿದಾರರು ಎಲ್ಲಾ ಕಾರ್ಮಿಕ ಕಾಯಿದೆಗಳನ್ನು ಪಾಲಿಸತಕ್ಕದ್ದು.

69) ತೆರೆದ ಸ್ಥಳದ ಮಳಿಗೆಗಳ ಪರವಾನಗಿ ಅವಧಿಯು 3 ವರ್ಷ ಮತ್ತು ಕಟ್ಟಿದ ಮಳಿಗೆಗಳ ಪರವಾನಗಿ ಅವಧಿಯು 5 ವರ್ಷಗಳಾಗಿರುತ್ತದೆ.

70) ನಿಗಮದ ಸುತ್ತೋಲೆ ಸಂಖ್ಯೆ:1425/2018ರ ಅನ್ವಯ ಕ.ರಾ.ರ.ಸಾ.ನಿಗಮದ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿನ ವಾಣಿಜ್ಯ ಮಳಿಗೆಗಳಲ್ಲಿ ನಿಗದಿತ ವಸ್ತುಗಳನ್ನು ಮಾರಾಟ ಮಾಡುವ ಬಗ್ಗೆ ಸಾ.ಸ್ಥಾ.ಆ.ಸಂಖ್ಯೆ:787/2017, XVII ರ ಕ್ರಮ ಸಂಖ್ಯೆ:04ರ "ವಾಣಿಜ್ಯ ಮಳಿಗೆಗಳಲ್ಲಿ ಪರವಾನಗಿದಾರರು ನಿಗದಿತ ವಸ್ತುಗಳನ್ನು ಹೊರತುಪಡಿಸಿ, ಇತರೆ ವಸ್ತುಗಳನ್ನು ಮಾರಾಟ ಮಾಡುತ್ತಿರುವುದು ನಿಗಮದ ಗಮನಕ್ಕೆ ಬಂದಲ್ಲಿ, ಅಂತಹ ಪರವಾನಗಿದಾರರಿಗೆ ಮೊದಲನೇ ಬಾರಿ ರೂ.1,000/- ದಂಡ, 2ನೇ ಬಾರಿ ರೂ.2,000/- ದಂಡ ಮತ್ತು 3ನೇ ಬಾರಿ ಅಥವಾ ತದನಂತರ ರೂ.5,000/- ದಂಡ ವಿಧಿಸುವ ಅಥವಾ ಕರಾರನ್ನು ರದ್ದುಪಡಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.

71) ನಿಗಮದ ಬಸ್ ನಿಲ್ದಾಣವನ್ನು ಮೇಲ್ದರ್ಜೆಗೆ ಬಸ್ ನಿಲ್ದಾಣಗಳ ನವೀಕರಣ ಕಾಮಗಾರಿ / ಆವರಣವನ್ನು ಮೇಲ್ದರ್ಜೆಗೇರಿಸುವ / ದುರಸ್ತಿ ಕಾರ್ಯಗಳನ್ನು ಕೈಗೆತ್ತಿಕೊಳ್ಳುವ ಸಮಯದಲ್ಲಿ, ನಿಗಮವು ಪರವಾನಗಿದಾರರಿಗೆ ಒಂದು ತಿಂಗಳು ಮುಂಗಡ ನೋಟಿಸ್‌ನ್ನು ಜಾರಿ ಮಾಡಿ ಪರವಾನಗಿಯನ್ನು ರದ್ದುಪಡಿಸಲಾಗುವುದು.

72) <u>ದ್ವಿಚಕ್ರ / ಕಾರ್ ವಾಹನ ನಿಲುಗಡೆ ಶುಲ್ಕ:</u>

ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ದ್ವಿಚಕ್ರ ವಾಹನ ನಿಲ್ದಾಣ ಹಾಗೂ ಕಾರು ನಿಲ್ದಾಣದ ವ್ಯವಸ್ಥೆ ಕಲ್ಪಿಸಲಾಗಿದ್ದು, ಪರವಾನಗಿದಾರರು ಈ ಕೆಳಕಂಡಂತೆ ನಿಲುಗಡೆ ಶುಲ್ಕ ವಿಧಿಸಬೇಕಿರುತ್ತದೆ.

<u>ತಾಲ್ಲೂಕು / ಇತರೆ ಬಸ್ ನಿಲ್ದಾಣಗಳ ಪಾರ್ಕಿಂಗ್ ದರಗಳು:</u>

| ವಾಹನದ ವಿಧ | ದರ (ರೂ.ಗಳಲ್ಲಿ) | | | |
|---|---|---|---|---|
| ಸಮಯ (ಗಂಟೆಗಳಲ್ಲಿ) | 0-1 | 1-4 | 4-24 | 24 ಗಂಟೆಗಳ ಮೇಲ್ಪಟ್ಟು |
| ಸೈಕಲ್ ವಾಹನ | 1 | 2 | 4 | ಪ್ರತಿ ದಿನಕ್ಕೆ ರೂ.8/- |
| ಸ್ಕೂಟರ್ / ದ್ವಿಚಕ್ರ ವಾಹನ | 2 | 4 | 8 | ಪ್ರತಿ ದಿನಕ್ಕೆ ರೂ.16/- |
| ಕಾರು | 4 | 10 | 15 | ಪ್ರತಿ ದಿನಕ್ಕೆ ರೂ.30/- |

ಮುಂದುವರೆದಂತೆ-6

೭೩) ಒಬ್ಬ ಗ್ರಾಹಕರು ಮೂರು (೦೩) ದಿನಗಳ ಮೇಲ್ಪಟ್ಟು ನಿರಂತರವಾಗಿ ವಾಹನವನ್ನು ಪಾರ್ಕಿಂಗ್ ಮಾಡಲು ಅವಕಾಶವಿರುವುದಿಲ್ಲ.

೭೪) ಸೈಕಲ್/ಸ್ಕೂಟರ್ ನಿಲ್ದಾಣ (ದ್ವಿಚಕ್ರ ವಾಹನ ನಿಲ್ದಾಣ) ಮತ್ತು ಕಾರು ನಿಲ್ದಾಣದಲ್ಲಿ ವಾಹನಗಳ ನಿಲುಗಡೆಗೆ ನಿಗದಿಪಡಿಸಿದ ದರಗಳನ್ನು ಮಾತ್ರ ಪಡೆದುಕೊಳ್ಳುವುದು. ಒಂದು ವೇಳೆ ನಿಗದಿತ ದರಕ್ಕಿಂತ ಹೆಚ್ಚಿನ ದರಗಳನ್ನು ಪರವಾನಗಿದಾರರು ಪಡೆಯುತ್ತಿರುವುದು ನಿಗಮದ ಗಮನಕ್ಕೆ ಬಂದಲ್ಲಿ, ಅಂತಹ ಪರವಾನಗಿದಾರರಿಗೆ ಮೊದಲ ಪ್ರಕರಣಕ್ಕೆ ರೂ.೫೦೦/-, ೨ ನೇ ಪ್ರಕರಣಕ್ಕೆ ರೂ.೧,೦೦೦/- ಮತ್ತು ೩ ನೇ ಪ್ರಕರಣಕ್ಕೆ ರೂ.೨,೦೦೦/- ದಂಡ ವಿಧಿಸುವುದು. ಇದು ಪುನರಾವರ್ತನೆಗೊಂಡಲ್ಲಿ ರೂ.೨,೦೦೦/- ದಂಡ ವಿಧಿಸುವ ಅಥವಾ ಕರಾರನ್ನು ರದ್ದುಪಡಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.

೭೪) ಬಸ್ ನಿಲ್ದಾಣಗಳಲ್ಲಿ ದ್ವಿಚಕ್ರ ವಾಹನ ನಿಲ್ದಾಣಕ್ಕೆ ಪರವಾನಗಿದಾರರನ್ನು ಆಯ್ಕೆ ಮಾಡಲು ಟೆಂಡರ್ ಕರೆಯುವಾಗ, ಅಂಗವಿಕಲರ ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳಿಗೆ ನಿಲ್ದಾಣದಲ್ಲಿ ಪಾರ್ಕಿಂಗ್ ಮಾಡಲು ಲಭ್ಯವಿರುವ ಸ್ಥಳದಲ್ಲಿ ಕನಿಷ್ಠ ಎರಡು ದ್ವಿಚಕ್ರ / ತ್ರಿಚಕ್ರ / ಕಾರನ್ನು ಅಥವಾ ಲಭ್ಯವಿರುವ ಪಾರ್ಕಿಂಗ್ ಸ್ಥಳದಲ್ಲಿ ಶೇ.೨ ರಷ್ಟನ್ನು ಅಂಗವಿಕಲರ ವಾಹನಗಳನ್ನು ಉಚಿತವಾಗಿ ನಿಲ್ಲಿಸಲು ಅವಕಾಶ ಇರುತ್ತದೆ.

ಮೇಲೆ ತಿಳಿಸಿರುವ ವಾಣಿಜ್ಯ ಮಳಿಗೆಗಳಿಗೆ/ಗ್ಲೋಸೈನ್ ಫಲಕಗಳ ಜಾಹೀರಾತುಗಳಿಗೆ ಅರ್ಜಿಯನ್ನು ಸಲ್ಲಿಸಲು ಇಚ್ಛೆಯುಳ್ಳವರು ಸಂಧಾನ ಅರ್ಜಿಗಳನ್ನು ನಿಗದಿಪಡಿಸಿರುವ ನಿಯಮಗಳು ಮತ್ತು ನಿಬಂಧನೆಗಳ ಜೊತೆಗೆ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ನಿಗದಿತ ಅರ್ಜಿ ಶುಲ್ಕವನ್ನು ಡಿ.ಡಿ.ರೂಪದಲ್ಲಿ " **ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕರಾರಸಾ ನಿಗಮ, ರಾಮನಗರ ವಿಭಾಗ** " ಇವರ ಹೆಸರಿನಲ್ಲಿ ಸಲ್ಲಿಸಿ, ಸಂಧಾನ ಪ್ರಕಟಣೆ ಹೊರಡಿಸಿದ ದಿನಾಂಕದಿಂದ ಅಂದರೆ ದಿ:17.08.2019 ರಿಂದ ದಿನಾಂಕ:05.09.2019ರ 1100 ಗಂಟೆಗಳವರೆಗೆ ತೆಗೆದು ಕೊಳ್ಳಬಹುದಾಗಿದೆ. ಭರ್ತಿ ಮಾಡಿದ ಸಂಧಾನ ಅರ್ಜಿಗಳನ್ನು ದಿನಾಂಕ:05.09.2019ರಂದು 1200 ಗಂಟೆಯವರೆಗೆ ಸ್ವೀಕರಿಸಲಾಗುವುದು. ದಿ:05.09.2019 ರಂದು 1200 ಗಂಟೆಗೆ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಟೆಂಡರ್‌ದಾರರು ಅಥವಾ ಅವರ ಅಧಿಕೃತ ಪ್ರತಿನಿಧಿಗಳ ಎದುರು ಸಂಧಾನವನ್ನು ಮಾಡಲಾಗುವುದು.

ವಿಭಾಗೀಯ ನಿಯಂತ್ರಣಾಧಿಕಾರಿ
ರಾಮನಗರ ವಿಭಾಗ:ರಾಮನಗರ